SN – 074

(2)

# I Semester B.Com. Examination, Nov./Dec. 2013
## (2011-12 and Onwards) (Fresher + Repeaters Scheme)
## ಕನ್ನಡ ಭಾಷೆ – I
## ಸಾಹಿತ್ಯ ಸಲ್ಲಾಪ – I

Time : 3 Hours Max. Marks : 100

I. 1) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : **(1×6=6)**

ತಾಯೆ ಬಿನ್ನಹವಿಂದು ನಿಮ್ಮ
ರಾಯ ಸೋತನು ಜೂಜಿನಲಿ ಕುರು
ರಾಯ ಗೆಲಿದರು ಕೋಶವನು ಗಜತುರಗ ರಥಸಹಿತ
ನೋಯಲಾಗದು ಹಲವು ಮಾತೇ
ನಾ ಯುಧಿಷ್ಠಿರ ನೃಪತಿ ಸೋತನು
ತಾಯೆ ಭೀಮಾರ್ಜುನ ನಕುಲ ಸಹದೇವ ನೀವ್ಸಹಿತ.

2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ರಗಳೆ, ಜಂಬಣ್ಣ ಅಮರಚಿಂತ, ಕವಿಸಿನ್ನ, ಬೆಳ್ಳಿಲೋಟ.

II. 1) ಇವುಗಳಲ್ಲಿ **ಐದು** ಪದಗಳಿಗೆ ಮೂಲ ಪದಗಳನ್ನು ಬರೆಯಿರಿ : **(5×1=5)**

ದಾಡೆ, ಯಾಸ, ವಂಸ, ಪ್ಯಾಟಿ, ಅರ್ಜೆಂಟು, ಗದ್ದೆ, ಮಾರಾಯ.

2) **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ವಹ್ನಿ, ತೊತ್ತು, ಕೌಪೀನ, ದ್ಯೂತ, ಚುಟುಕು, ಕದನ, ಧರಣಿಪತಿ.

3) **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**

ಹಣ್ಣುಗಾಯಿ, ಕಗ್ಗತ್ತಲು, ಪ್ರಜಾಧಿಪತ್ಯ, ಹೊರೆಯೇರಿ, ಕೌರವಾನುಜ, ಪೀತಾಂಬರ, ನಯನಾಂಗುಲಿ.

4) ಕಮಲಮುಖಿ, ಮೀನಾಕ್ಷಿ – ಈ ಮಾದರಿಯ **ಐದು** ಪದಗಳನ್ನು ಸ್ವಂತವಾಗಿ ರಚಿಸಿ. **(5×1=5)**

III. **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) 'ಕಲ್ಕಿ' ಕವನದಲ್ಲಿ ಕವಿ ಕಂಡ ಕನಸು ಯಾವುದು ?
2) ಮದರಸಾಬು ಮಾಡಿದ ಸಹಾಯವನ್ನು ಕುರಿತು ಬರೆಯಿರಿ.
3) ವೃದ್ಧ ಮಾಹೇಶ್ವರನ ಮಾತುಗಳಿಗೆ ನಂಬಿಯಣ್ಣ ಕೋಪಿಸಿಕೊಂಡದ್ದು ಏಕೆ ?
4) ಕರಿಯರ ನಿರ್ಬಂಧಕ್ಕಾಗಿ ಬಿಳಿಯರು ರೂಪಿಸಿದ ಕಾನೂನುಗಳು ಯಾವುವು ?
5) ನೂರರ ಇಪ್ಪತ್ತು ನೋಟುಗಳು ಕಳೆದು ಹೋದ ಪ್ರಸಂಗವನ್ನು ವಿವರಿಸಿ.
6) 'ಬೇಡುವುದು ನನಗೆ ಗೊತ್ತಿದ್ದರೆ ಬೇಡಿಕೆ ನನ್ನನಲುಗಿಸುತಿತ್ತು' ಎಂದು ಸೀಸರ್ ಯಾರಿಗೆ ಯಾವ ಸಂದರ್ಭದಲ್ಲಿ ಹೇಳುತ್ತಾನೆ ?

P.T.O.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : (4×12=48)

1) 'ಕಲ್ಕಿ' ಕವಿತೆಯಲ್ಲಿ ವ್ಯಕ್ತವಾದ ಕ್ರಾಂತಿಯ ಸ್ವರೂಪ ಎಂತಹುದು ? ಚರ್ಚಿಸಿ.

**ಅಥವಾ**

'ಶ್ರೀಮುಡಿಗೆ ಕೈಯ್ಯಿಕ್ಕಿದನು' ಕಾವ್ಯದಲ್ಲಿ ದುಶ್ಯಾಸನ ಮತ್ತು ದ್ರೌಪದಿಯ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

2) 'ಗಾಂಧಿ ಚಿತ್ರದ ನೋಟು' ಕತೆಯ ವೈಶಿಷ್ಟ್ಯವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

**ಅಥವಾ**

'ಬೆಂಗ್ಳೂರ್ ಅತ್ತೆಮ್ಮನ ಫಳಾರ' ಕತೆಯ ಸ್ವಾರಸ್ಯವನ್ನು ಕುರಿತು ಪರಿಶೀಲಿಸಿ.

3) ಆಫ್ರಿಕಾದ ವರ್ಣಭೇದ ನೀತಿಗೂ ಭಾರತದ ಜಾತಿಭೇದ ನೀತಿಗೂ ಇರುವ ಸಾದೃಶ್ಯ–ವೈದೃಶ್ಯಗಳನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?

**ಅಥವಾ**

ವೃದ್ಧ ಮಾಹೇಶ್ವರನು ನಂಬಿಯಣ್ಣನನ್ನು ಪರೀಕ್ಷಿಸಿದ ಸಂದರ್ಭದ ಸ್ವಾರಸ್ಯವನ್ನು ಕುರಿತು ಬರೆಯಿರಿ.

4) ಬ್ರೂಟಸ್ ಆಂಟೋನಿಗೆ ಭಾಷಣ ಮಾಡಲು ಅವಕಾಶ ಮಾಡಿಕೊಟ್ಟ ಪರಿಣಾಮ ಏನಾಯಿತು ? ಚರ್ಚಿಸಿ.

**ಅಥವಾ**

ಮೆಟಲಸ್ ಸಿಂಬರ್, ಕ್ಯಾಸ್ಕ, ಕ್ಯಾಸಿಯಸ್ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

---